**ಅಸಲು ದಾವಾ. ನಂಃ 255/2024**

**ಪಿಡಬ್ಲೂ - 3 ಶರಣಪ್ಪ ಮಳಗಿ**

**ಸಾಕ್ಷಿಯನ್ನು ದಿನಾಂಕಃ 17.04.2026 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಹೆಚ್.ಜೆ. ವಕೀಲರಿಂದಃ**

1. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಗೆ ವಾದಿ ಮಾಹಿತಿ ಕೊಟ್ಟಿರುತ್ತಾರೆ. ದಾವಾ ಆಸ್ತಿಗಳ ಸರ್ವೇ ನಂಬರ 459/1+5, ವಿಸ್ತೀರ್ಣ 3 ಎಕರೆ 35 ಗುಂಟೆ ಇರುತ್ತದೆ. ಸರ್ವೇ ನಂಬರ 239/1, ವಿಸ್ತೀರ್ಣ 2 ಎಕರೆ 8 ಗುಂಟೆ ಇರುತ್ತದೆ. ದಾವಾ ಆಸ್ತಿಗಳು ಈಗ ವಾದಿಯ ಹೆಸರಿನಲ್ಲಿರುತ್ತವೆ. ದಾವಾ ಆಸ್ತಿಗಳಲ್ಲಿ ವಾದಿಯ ಹೆಸರು ಯಾವಾಗ ದಾಖಲಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುತ್ತವೆ ಎಂದರೆ ನನಗೆ ಮಾಹಿತಿಯಿಲ್ಲ.

2. ವಾದಿಯರ ಮೂಲ ಪುರುಷನ ಹೆಸರು ಗೊತ್ತಿಲ್ಲ. ಭೀಮಪ್ಪ ಮತ್ತು ಭೀಮವ್ವ ವಾದಿಯರ ಮೂಲ ಪುರುಷ ಎಂದರೆ ಸರಿ. ಅವರಿಗೆ ದೊಡ್ಡ ಧರ್ಮಪ್ಪ ಮತ್ತು ಸಣ್ಣಧರ್ಮಪ್ಪ ಎನ್ನುವ ಇಬ್ಬರೂ ಮಕ್ಕಳು ಎಂದರೆ ಸರಿ. ದೊಡ್ಡ ಧರ್ಮಪ್ಪನಿಗೆ ನಿಂಗಮ್ಮ ಎನ್ನುವ ಹೆಂಡತಿ ಮತ್ತು ಸಣ್ಣಧರ್ಮಪ್ಪನಿಗೆ ಗುರಲಿಂಗವ್ವ ಎನ್ನುವ ಹೆಂಡತಿ ಎಂದರೆ ಸರಿ. ಸಣ್ಣಧರ್ಮಪ್ಪ ಮತ್ತು ಗುರುಲಿಂಗವ್ವಳಿಗೆ ಯಾವುದೇ ಮಕ್ಕಳು ಇರುವುದಿಲ್ಲ. ದೊಡ್ಡಧರ್ಮಪ್ಪ ಮತ್ತು ನಿಂಗಮ್ಮಳಿಗೆ 6 ಜನ ಮಕ್ಕಳು ಎಂದರೆ ಸರಿ. 6 ಜನ ಮಕ್ಕಳ ಪೈಕಿ ವಾದಿಯ ಗಂಡ ಮಲ್ಲಪ್ಪ ಒಬ್ಬ ಮಗ ಎಂದರೆ ಸರಿ. ವಾದಿಯು ಮಲ್ಲಪ್ಪನ ಹೆಂಡತಿ ಎಂದರೆ ಸರಿ.

3. ಸಣ್ಣಧರ್ಮಪ್ಪ ಮತ್ತು ದೊಡ್ಡಧರ್ಮಪ್ಪನ ನಡುವೆ ವಾಟ್ನಿಯಾದ ಬಗ್ಗೆ ನನಗೆ ಮಾಹಿತಿಯಿಲ್ಲ. ದೊಡ್ಡಧರ್ಮಪ್ಪನ ಮಕ್ಕಳ ನಡುವೆ ವಾಟ್ನಿಯಾದ ಬಗ್ಗೆ ನನಗೆ ಮಾಹಿತಿಯಿಲ್ಲ. ವಾದಿ ಮತ್ತು ಆಕೆಯ ಗಂಡನ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ವಾದಿಯು ಮದುವೆಯಾಗಿದ್ದಾಗಿನಿಂದ ಗಂಡನ ಮನೆಗೆ ಹೋಗಿಲ್ಲ ಎಂದರೆ ಸಾಕ್ಷಿಯು ಗಂಡನ ಮನೆ ಇಟಗಿಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಮಲ್ಲಪ್ಪ ತೀರಿಕೊಂಡ ನಂತರ ದಾವಾ ಆಸ್ತಿಗಳಲ್ಲಿ ಕಬ್ಜಾ ವಹಿವಾಟನ್ನು ವಾದಿಯೇ ಮಾಡುತ್ತಿದ್ದರು.

4. ವಾದಿಯು ನಾಗಪ್ಪ ಧರ್ಮರವರಿಗೆ ದಾವಾ ಆಸ್ತಿಗಳನ್ನು ವಹಿವಾಟು ಮಾಡಲು ಕೊಟ್ಟಿದ್ದರು ಎಂದರೆ ಸರಿ. ಆಗ ಪ್ರತಿವಾದಿಯರು ಇವು ನಮ್ಮ ಆಸ್ತಿಗಳು ನೀವೇಕೆ ವಹಿವಾಟು ಮಾಡಲು ಬಂದಿದ್ದೀರಿ ಎಂದು ನಾಗಪ್ಪನಿಗೆ ತಕರಾರು ಮಾಡಿದ್ದರು ಎಂದರೆ ಸರಿ. ಈ ಸಂಬಂದ ಜಗಳವಾಗಿ ಗಜೇಂದ್ರಗಡ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿತ್ತು ಎಂದರೆ ಸರಿ. ನಾಗರಾಜ ಧರ್ಮರವರಿಗೆ ಆಸ್ತಿಗಳನ್ನು ಉಳುಮೆ ಮಾಡಲು ಕೊಡುವ ಉದ್ದೇಶದಿಂದ ವಾದಿಯು ದಾವಾ ಆಸ್ತಿಗಳಲ್ಲಿ ವಹಿವಾಟು ಮಾಡುತ್ತಿದ್ದಾಳೆ ಎಂದು ಸುಳ್ಳು ಪ್ರಮಾಣ ಪತ್ರಿಕೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-
ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.

**ಅಸಲು ದಾವಾ. ನಂಃ 255/2024**

**ಪಿಡಬ್ಲ್ಯೂ - 2 ನಾಗರಾಜಪ್ಪ ಧರ್ಮರ**

**ಸಾಕ್ಷಿಯನ್ನು ದಿನಾಂಕಃ 17.04.2026 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಹೆಚ್.ಜೆ. ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಪ್ರಮಾಣ ಪತ್ರಿಕೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವೆಯಲ್ಲಿ ಒಟ್ಟು ಮೂರು ಆಸ್ತಿಗಳು ಇರುತ್ತವೆ. ಅವುಗಳ ಸರ್ವೇ ನಂಬರ ಹೇಳಲು ಆಗುವುದಿಲ್ಲ. ಒಂದು ಆಸ್ತಿಯು 3 ಎಕರೆ, ಇನ್ನೊಂದು ಆಸ್ತಿ 2 ಎಕರೆ ಮತ್ತೊಂದು ಆಸ್ತಿಯು 3 ಎಕರೆ ಚಿಲ್ಲರೆ ಇರುತ್ತದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳ ಸರ್ವೇ ನಂಬರಗಳನ್ನು ಹೇಳಿ ಬರೆಸಿಲ್ಲ.

2. ವಾದಿಯರ ಮೂಲ ಪುರುಷನ ಹೆಸರು ಗೊತ್ತಿಲ್ಲ. ಭೀಮಪ್ಪ ಮತ್ತು ಭೀಮವ್ವ ವಾದಿಯರ ಮೂಲ ಪುರುಷ ಎಂದರೆ ಸರಿ. ಅವರಿಗೆ ದೊಡ್ಡ ಧರ್ಮಪ್ಪ ಮತ್ತು ಸಣ್ಣಧರ್ಮಪ್ಪ ಎನ್ನುವ ಇಬ್ಬರೂ ಮಕ್ಕಳು ಎಂದರೆ ಸರಿ. ದೊಡ್ಡ ಧರ್ಮಪ್ಪನಿಗೆ ನಿಂಗಮ್ಮ ಎನ್ನುವ ಹೆಂಡತಿ ಮತ್ತು ಸಣ್ಣಧರ್ಮಪ್ಪನಿಗೆ ಗುರಲಿಂಗವ್ವ ಎನ್ನುವ ಹೆಂಡತಿ ಎಂದರೆ ಸರಿ. ಸಣ್ಣಧರ್ಮಪ್ಪ ಮತ್ತು ಗುರುಲಿಂಗವ್ವಳಿಗೆ ಯಾವುದೇ ಮಕ್ಕಳು ಇರುವುದಿಲ್ಲ. ದೊಡ್ಡಧರ್ಮಪ್ಪ ಮತ್ತು ನಿಂಗಮ್ಮಳಿಗೆ 6 ಜನ ಮಕ್ಕಳು ಎಂದರೆ ಸರಿ. 6 ಜನ ಮಕ್ಕಳ ಪೈಕಿ ವಾದಿಯ ಗಂಡ ಮಲ್ಲಪ್ಪ ಒಬ್ಬ ಮಗ ಎಂದರೆ ಸರಿ. ವಾದಿಯು ಮಲ್ಲಪ್ಪನ ಹೆಂಡತಿ ಎಂದರೆ ಸರಿ.

3. ದೊಡ್ಡಧರ್ಮಪ್ಪನ 6 ಜನ ಮಕ್ಕಳ ನಡುವೆ ಪಾಲುವಾಟ್ನಿಯಾದ ಬಗ್ಗೆ ನನಗೆ ಮಾಹಿತಿಯಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸರಿ. ಆ ಆಸ್ತಿಗಳು ಯಾರ ಯಾರ ಹೆಸರಿನಲ್ಲಿ ಇರುತ್ತವೆ ಎಂದು ನನಗೆ ಮಾಹಿತಿಯಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರಿಗೆ ಯಾವಾಗ ದಾಖಲಾಯಿತು ಎಂದರೆ ಸಾಕ್ಷಿಯು ಮಲ್ಲಪ್ಪ ಇದ್ದಾಗಲೇ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿಗೆ ಯಾವ ದಾಖಲಾತಿ ಆಧರಿಸಿ ದಾಖಲು ಮಾಡಿಸಿದರು ಎಂದು ನನಗೆ ಮಾಹಿತಿಯಿಲ್ಲ.

4. ವಾದಿಯು ಮಲ್ಲಪ್ಪನ ಖಾಸ ಅಕ್ಕನ ಮಗಳು ಎಂದರೆ ಸರಿ. ವಾದಿ ಮತ್ತು ಆಕೆಯ ಗಂಡನ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ವಾದಿಯು ಮದುವೆಯಾಗಿದ್ದಾಗಿನಿಂದ ಗಂಡನ ಮನೆಗೆ ಹೋಗಿಲ್ಲ ಎಂದರೆ ಸಾಕ್ಷಿಯು ಗಂಡನ ಮನೆ ಇಟಗಿಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಮನೆಗೆಲಸ ಮಾಡುತ್ತಾಳೆ. ವಾದಿಯು ಖಾಯಂ ತಾರೀಖಾಗಿ ಅಣ್ಣಿಗೇರಿ ತಾಲ್ಲೂಕು ಹಳ್ಳಿಕೇರಿ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಯಾವತ್ತೂ ಸಹ ಗಂಡನ ಮನೆಯಲ್ಲಿ ವಾಸವಾಗಿರುವುದಿಲ್ಲ ಎಂದರೆ ಸುಳ್ಳು.

5. ಮಲ್ಲಪ್ಪನು ಅನ್ಯ ಚಟಗಳಿಂದ ಕೂಡಿದ್ದ ಎಂದರೆ ಸುಳ್ಳು. ಅವುಗಳನ್ನು ಬಿಟ್ಟರೆ ಮಾತ್ರ ವಾದಿಯನ್ನು ಕಳುಹಿಸುತ್ತೇನೆ ಆಕೆಯ ತಾಯಿ ಪಟ್ಟು ಹಿಡಿದಿದ್ದರಿಂದ ಆಗ ಮಲ್ಲಪ್ಪನೊಂದಿಗೆ ವಾದಿಯ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಯಿತು ಎಂದರೆ ಸಾಕ್ಷಿಯು ಮಲ್ಲಪ್ಪ ಇದ್ದಾಗಲೇ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಈ ರೀತಿ ಚಟಗಳು ಇದ್ದುದ್ದರಿಂದಲೇ ವರದಿ ನೀಡಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದೊಡ್ಡಧರ್ಮಪ್ಪರವರು ಕಾನೂನುಬಾಹಿರ ಕೃತ್ಯವನ್ನು ಮತ್ತು ಕಾನೂನಿಗೆ ವಿರುದ್ದ ಕೆಲಸ ಮಾಡುವ ವ್ಯಕ್ತಿಯಾಗಿದ್ದ ಎಂದರೆ ಸುಳ್ಳು.

6. ದೊಡ್ಡಧರ್ಮಪ್ಪ ಮತ್ತು ಸಣ್ಣಧರ್ಮಪ್ಪರವರ ನಡುವೆ ವಾಟ್ನಿಯಾಗಿತ್ತು, ಸಣ್ಣಧರ್ಮಪ್ಪ ಮತ್ತು ಆತನ ಹೆಂಡತಿಗೆ ಮಕ್ಕಳಿಲ್ಲದೇ ಮರಣ ಹೊಂದಿದ್ದರಿಂದ ದೊಡ್ಡಧರ್ಮಪ್ಪ ಖೊಟ್ಟಿ ವರದಿ ನೀಡಿ ತನ್ನ ಹೆಸರಿಗೆ ಆಸ್ತಿಗಳ ಖಾತೆಯನ್ನು ಮಾಡಿಕೊಂಡಿದ್ದ ಎಂದರೆ ಸುಳ್ಳು. ಅದೇ ರೀತಿ ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾದ ಬಗ್ಗೆ ನನಗೆ ಮಾಹಿತಿಯಿಲ್ಲ. ದೊಡ್ಡಧರ್ಮಪ್ಪ ತನ್ನ ಪ್ರಭಾವ ಬಳಸಿ ಪ್ರತಿವಾದಿಗಳ ಹೆಸರನ್ನು ತೆಗೆಯಿಸಿ ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ. ದೊಡ್ಡಧರ್ಮಪ್ಪ ಪ್ರತಿವಾದಿಗಳ ಆಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ದಾವಾ ಆಸ್ತಿಗಳಲ್ಲದೇ ಕುಟುಂಬಕ್ಕೆ ಇರುವ ಬೇರೆ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಮಾಹಿತಿಯಿಲ್ಲ.

7. ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ಸಂಬಂಧಿಸಿದ ಇನ್ನೂ ಕೆಲವು ಆಸ್ತಿಗಳು ಮೂಲ ಪುರುಷ ಭೀಮಪ್ಪನ ಹೆಸರಿಗೆ ಖಾತೆ ಇರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಪ್ರತಿವಾದಿಗಳು ವಾದಿಯು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪಾಲುವಾಟ್ನಿ ಕೋರಿ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.